ಮಾತೆತ್ತಿದರೆ ಪಾಕಿಸ್ತಾನಕ್ಕೆ ಹೋಗಿ ಎನ್ನುವ ಯತ್ನಾಳರೇ ಇದೇನು ನಿಮ್ಮ ಅಪ್ಪನ ಊರಾ ಎಂದು ಪ್ರಶ್ನಿಸಿದರು. ಜಾತಿ ರಾಜಕಾರಣ ಮಾಡುವುದು ಬಿಟ್ಟು ಅಭಿವೃದ್ಧಿ ಮಾಡಿ. ಇನ್ನೊಮ್ಮೆ ಮಹಮ್ಮದ ಪೈಗಂಬರ್‌ಬಗ್ಗೆ ಮಾತನಾಡಿದರೆ ನಿಮ್ಮ ಮನೆಗೆ ಬರುತ್ತೇವೆ

• **ಅಬ್ದುಲ್ ಹಮೀದ್ ಮುಶ್ರೀಫ್** ಕಾಂಗ್ರೆಸ್ ಮುಖಂಡ

ಸುದ್ದಿ ಸಿಂಚನ

ದೈಹಿಕ ಶಿಕ್ಷಕ ಶಿವಕುಮಾರ ರಾಜ್ಯಮಟ್ಟಕ್ಕೆ ಆಯ್ಕೆ

ಕೊಲ್ಹಾರ: ಅಂಬೇಡ್ಕರ್‌ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ವಿಜಯಪುರ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ತಾಲೂಕಿನ ಕುಪಕಡ್ಡಿ ಸರ್ಕಾರಿ ಪ್ರೌಢಶಾಲೆಯ ದೈಹಿಕ ಶಿಕ್ಷಕ ಶಿವಕುಮಾರ ಹಿರೇಮಠ 800 ಮೀಟರ್‌ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ 400 ಮೀಟರ್‌ಓಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ, 4★400 ಮೀಟರ್‌ರಿಲೇಯಲ್ಲಿ ಪ್ರಥಮ ಸ್ಥಾನ, ಉದ್ದ ಜಿಗಿತ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಹಾಗೂ ಬಾಲ್ ಬ್ಯಾಡ್ಮಿಂಟನ್ ಪಂದ್ಯಾಟದಲ್ಲಿ ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ಸಾಧನೆ ಮಾಡಿದ ಶಿಕ್ಷಕರಿಗೆ ವಿಜಯಪುರ ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸುರೇಶ್ ಶೇಡಶ್ಯಾಳ ಪ್ರಶಸ್ತಿ ಪತ್ರವನ್ನು ವಿತರಿಸಿ ಅಭಿನಂದಿಸಿದರು.

ಭಗವಾನ್ ಮಹಾವೀರ ಜಯಂತಿ ಆಚರಣೆ

ಕೊಲ್ಹಾರ: ತಹಸೀಲ್ದಾರ್‌ಕಚೇರಿಯಲ್ಲಿ ಗುರುವಾರ ಭಗವಾನ್ ಮಹಾವೀರ ಜಯಂತಿಯನ್ನು ಸಮಾಜದ ಮುಂಖಡರೊಂದಿಗೆ ಆಚರಿಸಲಾಯಿತು. ತಹಸೀಲ್ದಾರ್ ಎಸ್.ಎಸ್.ನಾಯಕಲ್ ಮಠ ಹಾಗೂ ಅಜೀತ ಭಗವಾನ ಮಹಾವೀರ ಜೀವನ, ಸಾಧನೆ ಹಾಗೂ ಚರಿತ್ರೆಯನ್ನು ಮಾರ್ಮಿಕವಾಗಿ ತಿಳಿಸಿದರು. ಸಮಾಜದ ಮುಖಂಡರಾದ ಮಹಾವೀರ ಮಲಗೊಂಡ, ಮಲ್ಲಿನಾಥ ಮಲಗೊಂಡ, ಶ್ರೀಪತಿ ಮಲಗೊಂಡ ಹಾಗೂ ಸಮಾಜದ ಇತರೆ ಮುಂಖಡರು ಹಾಜರಿದ್ದರು. ತಹಸೀಲ್ದಾರ್ ಕಚೇರಿ ಶಿರಸ್ತೇದಾರರಾದ ಕೃಷ್ಣಾ ಗುಡೂರ ನಿರೂಪಿಸಿ ವಂದಿಸಿದರು.

ಕೆರೆಗಳನ್ನು ತುಂಬಿಸುವಂತೆ ರೈತ ಮುಖಂಡರ ಆಗ್ರಹ

ವಿಜಯಪುರ: ಜಿಲ್ಲೆಯ ಎರಡನೇಯ ಅತೀ ದೊಡ್ಡ ಕೆರೆಯಾಗಿರುವ ಜಂಬಗಿ, ಆಹೇರಿ ಕೆರೆಗಳನ್ನು ತುಂಬಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರೈತ ಸಂಘ ಹಾಗೂ ಹಸಿರು ಸೇನೆ ಮುಖಂಡರು ಒತ್ತಾಯಿಸಿ ತಹಸೀಲ್ದಾರ್‌ರಿಗೆ ಮನವಿ ಸಲ್ಲಿಸಿದರು.

ಸಂಘದ ತಾಲೂಕಾ ಅಧ್ಯಕ್ಷ ಮಹಾದೇವಪ್ಪ ತೇಲಿ ಮಾತನಾಡಿ, ವಿಜಯಪುರ ಜಿಲ್ಲೆಯ ಜಂಬಗಿ-ಆಹೇರಿ ಗ್ರಾಮದ ಜಿಲ್ಲೆಯ 2ನೇ ಅತಿ ದೊಡ್ಡ ಕೆರೆಯಾಗಿದ್ದು, ಇದನ್ನು ಸಂಪೂರ್ಣ ತುಂಬಿಸಬೇಕು ಹಾಗೂ ಅಕ್ರಮವಾಗಿ ನೀರು ಪೋಲಾಗುವುದನ್ನು ತಡೆಗಟ್ಟಿ ಕೆರೆ ತುಂಬಿಸುವ ಕಾರ್ಯ ಆಗಬೇಕು. ಅಂಕಲಗಿ, ಜಂಬಗಿ, ಆಹೇರಿ, ಹೊನ್ನಳ್ಳಿ, ಹುಣಶ್ಯಾಳ ಮತ್ತು ನಾಗಠಾಣ ಈ ಭಾಗದ ರೈತರಿಗೆ, ಜನ-ಜಾನುವಾರುಗಳಿಗೆ ಕುಡಿಯುವ ನೀರು ಅವಶ್ಯಕವಾಗಿದೆ. ಜಲ ಮೂಲಗಳಿಗೆ ನೀರು ವೃದ್ಧಿಯಾಗಬೇಕು. 2025 ನೇ ಸಾಲಿನ ಎರಡು ತಿಂಗಳ ಹಿಂದೆ ಕೆರೆಗೆ ಬಿಟ್ಟದ್ದ ನೀರು ಕೆರೆಗೆ ಬಂದಿರುವುದಿಲ್ಲ. ಅರ್ಧದಲ್ಲೇ ನೀರು ಪೋಲಾಗುತ್ತಿದ್ದು, ಕೆರೆಗೆ ತಲುಪುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕೂಡಲೇ ನೀರು ಪೋಲಾಗುವುದನ್ನು ತಡೆಗಟ್ಟಿ ಈ ವರ್ಷ ಬಿಸಿಲಿನ ಬೇಗೆ ಹೆಚ್ಚಾಗಿದೆ. ಇಲ್ಲಿಯವರೆಗೆ ಕೆರೆಗೆ ನೀರು ಹರಿಸಿಲ್ಲ, ತಕ್ಷಣ ನೀರಿನ ಹಾಹಾಕಾರವನ್ನು ನಿಯಂತ್ರಿಸಬೇಕು ಎಂದು ಒತ್ತಾಯಿಸಿದರು.

ತಾಲೂಕು ಸಂಚಾಲಕರಾದ ರಾಜೇಸಾ ನದಾಫ್, ನಜೀರ ನದಾಫ್, ಜಯಸಿಂಗ ರಜಪೂತ, ತೌಸೀಪ್ ಮುಲ್ಲಾ, ಟಿ.ಎಲ್.ಮುಲ್ಲಾ, ಸಂತೋಷ ಛಲವಾದಿ, ರಫೀಕ ನದಾಫ್, ಹಣಮಂತ ವಾಲಿಕಾರ ಮುಂತಾದವರು ಉಪಸ್ಥಿತರಿದ್ದರು.

ಕೇಂದ್ರ ಸರ್ಕಾರದಿಂದ ಮುಸ್ಲಿಮರ ಟಾರ್ಗೆಟ್

22/ 24 ರಂದು ವಕ್ಫ್ ಬಿಲ್ ತಿದ್ದುಪಡಿ ಕಾಯ್ದೆ ವಿರೋಧಿಸಿ ನಗರದಲ್ಲಿ ಬೃಹತ್ ರ‍್ಯಾಲಿ: ಮುಶ್ರೀಫ್

• **ಕನ್ನಡಪ್ರಭ ವಾರ್ತೆ** ವಿಜಯಪುರ

ವಕ್ಫ್ ಬಿಲ್ ತಿದ್ದುಪಡಿ ಕಾಯ್ದೆಯನ್ನು ನಾವು ವಿರೋಧಿಸುತ್ತೇವೆ. ಅಲ್ಲದೇ, ಕೇಂದ್ರದ ಈ ನಡೆ ಖಂಡಿಸಿ ಏ.22 ಅಥವಾ 24ರಂದು ನಗರದಲ್ಲಿ ಬೃಹತ್ ರ‍್ಯಾಲಿ ಮಾಡಿ, ರಾಷ್ಟ್ರಪತಿಗಳಿಗೆ ಮನವಿ ಕೊಡಲಾಗುವುದು ಎಂದು ಕಾಂಗ್ರೆಸ್ ಮುಖಂಡ ಅಬ್ದುಲ್ ಹಮೀದ್ ಮುಶ್ರೀಫ್ ಹೇಳಿದರು.

ನಗರದಲ್ಲಿ ಕಾಂಗ್ರೆಸ್ ಮುಖಂಡರೊಂದಿಗೆ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಅಲ್ಪಸಂಖ್ಯಾತರನ್ನು ಟಾರ್ಗೆಟ್ ಮಾಡಿಯೇ ಬಿಜೆಪಿಯವರು ಏನಾದರೂ ಒಂದು ಕಾಯ್ದೆ ತರುತ್ತಾರೆ. ಈಗ ವಕ್ಫ್‌ಗೆ ತಿದ್ದುಪಡಿ ತರುವ ಅವಶ್ಯಕತೆ ಇರಲಿಲ್ಲ. ಅಲ್ಪಸಂಖ್ಯಾತರನ್ನು ಕಾಡಿಸುವ ಉದ್ದೇಶದಿಂದಲೇ ಹೀಗೆ ಮಾಡಿದ್ದಾರೆ. ಇದನ್ನು ಪ್ರಶ್ನಿಸಿ ವಿಜಯಪುರದಿಂದಲೇ ನಾವು ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗುವುದಾಗಿ ತಿಳಿಸಿದರು.

ಮಹಮ್ಮದ ಪೈಗಂಬರ್‌ಸಲುವಾಗಿ ನಾವು ಜೀವ ಕೊಡುತ್ತೇವೆ. ಇನ್ನುಮುಂದೆ ಮುಸ್ಲಿಂ ಸಮುದಾಯಕ್ಕೆ ಹಾಗೂ ಮಹಮ್ಮದ ಪೈಗಂಬರ್ ಬಗ್ಗೆ ಮಾತನಾಡಿದರೆ ಸರಿ ಇರಲ್ಲ ಎಂದು ಗುಡುಗಿದ ಅವರು, ಮಾತೆತ್ತಿದರೆ ಪಾಕಿಸ್ತಾನಕ್ಕೆ ಹೋಗಿ ಎನ್ನುವ ಯತ್ನಾಳರೇ ಇದೇನು ನಿಮ್ಮ ಅಪ್ಪನ ಊರಾ ಎಂದು ಪ್ರಶ್ನಿಸಿದರು. ಜಾತಿ ರಾಜಕಾರಣ ಮಾಡುವುದು

ವಿಜಯಪುರ ನಗರದಲ್ಲಿ ಕಾಂಗ್ರೆಸ್ ಮುಖಂಡರೊಂದಿಗೆ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ಅಬ್ದುಲ್ ಹಮೀದ್ ಮುಶ್ರೀಫ್. ಈ ವೇಳೆ ಅಹಿಂದ ಮುಖಂಡ ಎಸ್.ಎಂ.ಪಾಟೀಲ ಗಣಿಹಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬಿಟ್ಟು ಅಭಿವೃದ್ಧಿ ಮಾಡಿ. ಇನ್ನೊಮ್ಮೆ ಮಹಮ್ಮದ ಪೈಗಂಬರ್‌ಬಗ್ಗೆ ಮಾತನಾಡಿದರೆ ನಿಮ್ಮ ಮನೆಗೆ ಬರುತ್ತೇವೆ ಎಂದು ಎಚ್ಚರಿಕೆ ನೀಡಿದರು.ಅಹಿಂದ ಮುಖಂಡ ಎಸ್.ಎಂ.ಪಾಟೀಲ ಗಣಿಹಾರ ಮಾತನಾಡಿ, ವಕ್ಫ್ ಎಂಬ ಪದದ ಅರ್ಥವೇ ಇವರಿಗೆ ಗೊತ್ತಿಲ್ಲ. ವಕ್ಫ್ ಎಂದರೆ ಮುಸ್ಲಿಂ ಸಮುದಾಯದಲ್ಲಿ ದೇವರಿಗೆ ದೇಣಿಗೆ ನೀಡಿದ ಆಸ್ತಿಗಳನ್ನು ಸಂರಕ್ಷಣೆ ಮಾಡಲು ಇರುವ ಒಂದು ಮಂಡಳಿ. ಕಳೆದ 11 ವರ್ಷಗಳಿಂದ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ದೇಶಕ್ಕಾಗಿ, ಜನರಿಗಾಗಿ, ಬಡವರಿಗಾಗಿ ಏನೂ ಮಾಡಿಲ್ಲ. ಇವರು ಮಾಡಿದ್ದು ತ್ರಿವಳಿ ತಲಾಕ್, ಹಿಜಾಬ್, ಹಲಾಲ್ ಕಟ್ ಸೇರಿದಂತೆ ಇಂತದ್ದೇ ಗಲಭೆ ಸೃಷ್ಟಿಸುವ ಕೆಲಸ ಮಾಡಿದ್ದಾರೆ. ಐಟಿ, ಇಡಿಗಳನ್ನು ಛೂಬಿಟ್ಟು ಪಿಎಂ ಕೇರ್‌ಫಂಡ್‌ಗೆ ಸಾಕಷ್ಟು ಅನುದಾನ ಪಡೆಯುತ್ತಿದ್ದಾರೆ. ಇದೆಲ್ಲವನ್ನು ಮರೆಮಾಚಿ ದೇಶದ ಜನರ ಗಮನ ಬೇರೆಡೆ ಸೆಳೆಯಲು ವಕ್ಫ್ ಹೆಸರಿನಲ್ಲಿ ಹೀಗೆಲ್ಲ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ನಾಡಿನ ಪ್ರಜ್ಞಾವಂತರು, ಲಿಂಗಾಯತ ಸಮುದಾಯದ ಜನರು ಇವರನ್ನು ಹೊರಗೆ ಹಾಕಬೇಕು ಎಂದು ಮನವಿ ಮಾಡಿದರು. ಮುಖಂಡರಾದ ಮಹಮ್ಮದ ರಫೀಕ್ ಟಪಾಲ್, ಅಬ್ದುಲ್‌ರಜಾಕ್ ಹೊರ್ತಿ, ಎಂ.ಸಿ.ಮುಲ್ಲಾ, ಎಸ್.ಎಸ್.ಖಾದ್ರಿ, ಫಯಾಜ್ ಕಲಾದಗಿ, ದಸ್ತಗೀರ ಸಾಲೊಟಗಿ ಉಪಸ್ಥಿತರಿದ್ದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳರಿಗೆ ಬೇರೆ ಕೆಲಸವಿಲ್ಲ. ಇವರು ಹಿಂದು ಯಾವಾಗ ಆದರು?. 2013ರಲ್ಲಿ ಜೆಡಿಎಸ್‌ನಲ್ಲಿದ್ದಾಗ ಟೋಪಿ ಹಾಕಿಕೊಂಡು ದರ್ಗಾಗೆ, ಮಸೀದಿಗೆ ಹೋಗುತ್ತಿದ್ದರು. ಯತ್ನಾಳ ಲಿಂಗಾಯತ ಧರ್ಮದಲ್ಲಿ ಹುಟ್ಟಿ ಬಸವಣ್ಣನವರ ವಚನಗಳು ಹಾಗೂ ಅವುಗಳ ಅರ್ಥವೂ ಗೊತ್ತಿಲ್ಲ.

• **ಎಸ್.ಎಂ.ಪಾಟೀಲ ಗಣಿಹಾರ,** ಅಹಿಂದ ಮುಖಂಡ

ಯತ್ನಾಳ ವಿರುದ್ಧ ನಕಲಿ ವೋಟಿಂಗ್ ಆರೋಪ

ಯತ್ನಾಳ ಅವರು ಬೋಗಸ್ (ನಕಲಿ) ವೋಟಿಂಗ್ ಮಾಡಿಕೊಂಡು ವಿಧಾನಸಭೆ ಚುನಾವಣೆಯಲ್ಲಿ ಗೆದ್ದಿದ್ದಾರೆ. ಒಂದು ವೇಳೆ ಅವರು ನಕಲಿ ಮತಗಳನ್ನು ಸೃಷ್ಟಿಸಿಲ್ಲ ಎಂದಾದರೆ ನಗರದ ಆರಾಧ್ಯ ದೈವ ಸಿದ್ದೇಶ್ವರ ದೇಗುಲ ಪ್ರವೇಶಿಸಿ ದೇವರ ಮೇಲೆ ಪ್ರಮಾಣ ಮಾಡಿ ಹೇಳಲಿ ನೋಡೋಣ ಎಂದು ಸವಾಲು ಹಾಕಿದರು. ಯತ್ನಾಳ ಅವರು ಹೈಕೋರ್ಟ್‌ನಲ್ಲಿ ಸೆಟ್ಟಿಂಗ್ ಮಾಡಿದ್ದರಿಂದ ನಮಗೆ ಹಿನ್ನಡೆಯಾಗಿದೆ. ಇದೀಗ ನಾವು ಸುಪ್ರೀಂ ಕೋರ್ಟ್‌ಗೆ ಹೋಗಿದ್ದೇವೆ. ಚಿಂಚೋಳಿಯಿಂದ ಬಂದ ಕೆಲವರು ಓಟಿಂಗ್ ಮಾಡಿದ್ದು, ಅವರ ಮತದಾನದ ಹಕ್ಕುಗಳು ಡಬಲ್ ಆಗಿವೆ (ಎರಡು ಕಡೆ) ಎಂದು ನಾನು ಪ್ರೂವ್ ಮಾಡುತ್ತೇನೆ. ಮಾಡಿಲ್ಲವಾದರೆ ರಾಜಕೀಯದಿಂದ ನಿವೃತ್ತಿಯಾಗುವುದಾಗಿ ಕಾಂಗ್ರೆಸ್ ಮುಖಂಡ ಅಬ್ದುಲ್ ಹಮೀದ್ ಮುಶ್ರೀಫ್ ತಿಳಿಸಿದರು.

ಮಹಾವೀರರ ಬೋಧನಾ ತತ್ವ ಸಾರ್ವಕಾಲಿಕ

ಭಗವಾನ ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಭೂಬಾಲನ್ ಸ್ಮರಣೆ

• **ಕನ್ನಡಪ್ರಭ ವಾರ್ತೆ** ವಿಜಯಪುರ

ಜೈನ ಧರ್ಮದ 24ನೇ ತೀರ್ಥಂಕರ ಭಗವಾನ ಮಹಾವೀರ ಅವರ ಚಿಂತನೆಯ ಸತ್ಯ, ಅಹಿಂಸೆ, ಕರುಣಾಭಾವದಂತಹ ಬೋಧನಾ ತತ್ವಗಳು ಸಾರ್ವಕಾಲಿಕ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಹೇಳಿದರು.

ನಗರದ ಕಂದಗಲ್ ಶ್ರೀಹನಮಂತರಾಯ ರಂಗ ಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಮ್ಮಿಕೊಂಡಿದ್ದ ಭಗವಾನ ಮಹಾವೀರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಅಹಿಂಸೆಯ ಆಚರಣೆಯ ಮಾರ್ಗದಲ್ಲಿ ಜೀವನದ ಸಾಕ್ಷಾತ್ಕಾರದ ಪಥ ತೋರಿಸಿದ ಮಹಾಪುರುಷರು. ಸಕಲ ಜೀವಿಗಳಿಗೂ ಒಳಿತು ಬಯಸಿದ ಮಹಾವೀರರು, ಆ ದಿಸೆಯಲ್ಲಿ ಜೀವನ ಮುಡುಪಾಗಿಟ್ಟಿದ್ದರು. ಅವರು ನೀಡಿದ ಸಂದೇಶಗಳನ್ನು ಅರಿತು ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದರು.

ಭಗವಾನ ಮಹಾವೀರರು, ನೀನು ಜೀವಿಸು ಇತರರಿಗೂ ಜೀವಿಸಲು ಅವಕಾಶ ನೀಡು ಸತ್ಯವನ್ನೇ ನುಡಿ, ಕಳ್ಳತನ ಮಾಡಬೇಡ, ಸುಳ್ಳು ಹೇಳಬೇಡ, ಅಹಿಂಸೆಯೇ ಪರಮ ಧರ್ಮ ಎಂಬ ವಿಚಾರಗಳನ್ನು ಪ್ರತಿಪಾದಿಸುವ ಮೂಲಕ ಈ ಜಗತ್ತಿಗೆ ಉತ್ತಮ ಸಂದೇಶ ನೀಡಿದ್ದಾರೆ ಎಂದು ಸ್ಮರಿಸಿದರು.

ಎಡಿಎಸ್ಪಿ ಶಂಕರ ಮಾರಿಹಾಳ ಮಾತನಾಡಿ, ಭಗವಾನ ಮಹಾವೀರರ ತತ್ವ ಸಿದ್ಧಾಂತಗಳನ್ನು ಈಗಿನ ಯುವಕರು ಪಾಲನೆಮಾಡುವ ಜೊತೆಗೆ ಅಳವಡಿಸಿಕೊಳ್ಳಬೇಕು. ಅವರು ಶಾಂತಿ ಪ್ರಿಯರು, ಅಹಿಂಸಾವಾದಿಗಳಾಗಿ ತತ್ವ ಚಿಂತನೆಗಳ ಮೂಲಕ ಎಲ್ಲರ ಅಭ್ಯುದಯ ಬಯಸಿದವರು ಎಂದು ಹೇಳಿದರು.

ಪ್ರಾಧ್ಯಾಪಕ ಡಾ.ಕಿರಣ ಓಸ್ವಾಲ್ ಉಪನ್ಯಾಸ ನೀಡಿ, ಭಗವಾನ ಮಹಾವೀರರು ಸತ್ಯ, ಅಹಿಂಸೆ, ಆಸ್ತೆಯ, ಅಪರಿಗ್ರಹ ಹಾಗೂ ಬ್ರಹ್ಮಚರ್ಯವನ್ನು ಅನುಸರಿಸುವುದರಿಂದ ವ್ಯಕ್ತಿಯು ಮೋಕ್ಷ ಪಡೆಯುತ್ತಾನೆ ಎಂಬ ಸಂದೇಶ ನೀಡಿದರು.

ಆಚಾರ್ಯ ಹೀರಚಂದ ವಿಜಯಜಿ ಮಹಾರಾಜ ಆಶೀರ್ವಚನ ನೀಡಿದರು. ಅಪರ ಜಿಲ್ಲಾಧಿಕಾರಿ ಸೊಮಲಿಂಗ ಗೆಣ್ಣೂರ, ಜಿಪಂ ಯೋಜನಾ ನಿರ್ದೇಶಕ ಬಿ.ಎಸ್. ರಾಠೋಡ, ವಿವಿಧ ಸಂಘ ಸಂಸ್ಥೆಯ ಮುಖಂಡರಾದ ಮಹಾವೀರ ಪಾರೇಖ, ನಿತಿನ್ ರುಣವಾಲ, ಮದನ್ ಜೈನ್, ಅರುಣ ರುಣವಾಲ್, ವಿಜಯ ರುಣವಾಲ, ವಿಕ್ರಮ ರುಣವಾಲ, ಅಶೋಕ ರುಣವಾಲ, ವಿದ್ಯಾವತಿ ಅಂಕಲಗಿ ಹಾಗೂ ಸೇರಿ ಅಧಿಕಾರಿಗಳು ಇದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಬೋವಿ ಸ್ವಾಗತಿಸಿದರು. ಪಾಲಿಕೆಯ ವಲಯ ಆಯುಕ್ತ ಮಹಾವೀರ ಬೋರನ್ನವರ ವಂದಿಸಿದರು.

ಬೆಳಿಗ್ಗೆ ನಗರದ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಮಹಾವೀರರ ಭಾವಚಿತ್ರ ಮೆರವಣಿಗೆಗೆ ಚಾಲನೆ ನೀಡಿದರು.

ತಾಲೂಕು ಆಡಳಿತದಿಂದ ಮಹಾವೀರ ಜಯಂತಿ

• **ಕನ್ನಡಪ್ರಭ ವಾರ್ತೆ** ಬಸವನಬಾಗೇವಾಡಿ:

ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಗುರುವಾರ ಮಹಾವೀರ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಗೌರವಿಸುವ ಮೂಲಕ ಮಹಾವೀರ ಜಯಂತಿಯನ್ನು ಆಚರಿಸಲಾಯಿತು.

ಉಪತಹಸೀಲ್ದಾರ್ ಎಂ.ಎಸ್.ಜಾಗೀರದಾರ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಶಿಕ್ಷಕ ಎ.ಎ.ಉಪಾಧ್ಯೆ ಅವರು ಮಹಾವೀರ ಜೀವನ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಶಿರಸ್ತೇದಾರ ಎ.ಎಚ್.ಬಳೂರಗಿ, ತಹಸೀಲ್ದಾರ್ ಕಚೇರಿಯ ಸಿಬ್ಬಂದಿಗಳಾದ ಗುರುರಾಜ ಗಡಗಿ, ಮಂಜು ಹಳ್ಳೂರ, ರಾಮಚಂದ್ರ ಘಾಟಗೆ, ವಿಲಾಸ ಜಾಡರ, ಕ್ಷೇತ್ರಸಮನ್ವಾಯಾಧಿಕಾರಿ ಸುನೀಲ ನಾಯಕ, ಸಿಆರ್‌ಪಿ ಮಹೇಶ ಪೂಜಾರಿ, ಹಿಂದುಳಿತ ವರ್ಗಗಳ ಇಲಾಖೆಯ ಸಿ.ಜಿ.ಬಿರಾದಾರ, ತಾಲೂಕು ಪಂಚಾಯಿತಿಯ ಸಿಬ್ಬಂದಿ ರಾಜೇಶ್ವರಿ ಆಸಂಗಿ, ಜೈನ ಸಮುದಾಯ ಬಾಂಧವರಾದ ಅಪ್ಪು ದಂಡಾವತಿ, ಬಾಹುಬಲಿ ದಂಡಾವತಿ, ಮಹಾವೀರ ಹೊಸಮನಿ, ದಯಾಸಾಗರ ಉಪಾಧ್ಯೆ, ಪಾರೀಷ ಹೊಸಮನಿ, ವಿದ್ಯಾಧರ ಉಪಾಧ್ಯೆ, ಪ್ರವೀಣ ದಂಡಾವತಿ, ಪ್ರಮೋದ ದಂಡಾವತಿ, ಸಂಜೀವ ಬೋಗಾರ, ಡಿಎಸ್‌ಎಸ್ ಮುಖಂಡರಾದ ಮಹಾಂತೇಸ ಸಾಸಾಬಾಳ, ಪರಶುರಾಮ ದಿಂಡವಾರ, ಗುರುರಾಜ ಗುಡಿಮನಿ ಸೇರಿದಂತೆ ಇನ್ನು ಮುಂತಾದವರು ಈ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಳಪೆ ತೊಗರಿ ಬೀಜ: ಕ್ರಮಕ್ಕೆ ಕರವೇ ಆಗ್ರಹ

• **ಕನ್ನಡಪ್ರಭ ವಾರ್ತೆ** ತಾಂಬಾ

ಕಳಪೆ ತೊಗರಿ ಬೀಜ ವಿತರಣೆ ಮಾಡಿ ಇಳುವರಿ ಕುಂಠಿತವಾಗಲೂ ಕಾರಣವಾಗಿರುವ ಕಂಪನಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಈ ಭಾಗದ ಗುತ್ತಿ ಬಸವಣ್ಣ ಏತ ನೀರಾವರಿ ಕಾಲುವೆಗೆ ಜಾನುವಾರುಗಳಿಗೆ ಕುಡಿಯಲು ನೀರು ಹರಿಸುವ ಕೆಲಸ ಮಾಡಬೇಕು ಎಂದು ಕರವೇ ಅಧ್ಯಕ್ಷ ಶಿವರಾಜ ಕೆಂಗನಾಳ ಆಗ್ರಹಿಸಿದರು.

ಪಟ್ಟಣದ ಅಂಬೇಡ್ಕರ ವೃತ್ತದಿಂದ ಸಂಗನಬಸವೇಶ್ವರ ವೃತ್ತ, ಭಗತ್ ಸಿಂಗ್ ವೃತ್ತದಲ್ಲಿ ಭವ್ಯ ಮೆರವಣಿಗೆ ಮಾಡಿ ಇಂಡಿ-ದೇವರ ಹಿಪ್ಪರಗಿ ರಸ್ತೆ ಬಂದ್ ಮಾಡಿ ಟೈರ್ ಸುಟ್ಟು ಪ್ರತಿಭಟಿಸಿದರು. ಸಂಗನಬಸವೇಶ್ವರ ವೃತ್ತದಲ್ಲಿ ಧರಣಿ ಕುಳಿತ ಸುದ್ದಿ ತಿಳಿದು ಇಂಡಿ ಉಪ ತಹಸೀಲ್ದಾರರು ಆಗಮಿಸಿ ಧರಣಿ ನಿರತರಿಂದ ಮನವಿ ಸ್ವಿಕರಿಸಿದರು. ಈ ವೇಳೆ ಕರವೇ ವಕ್ತಾರ ಮಾಸಿಮ ವಾಲಿಕಾರ, ಆರ್.ಎಸ್.ಪೂಜಾರಿ ಮಾತನಾಡಿ, ರೈತರ ಬೇಡಿಕೆಗಳಿಗೆ ಪರಿಹಾರ ವಿತರಿಸದಿದ್ದರೆ ಇಂಡಿ, ದೇವರ ಹಿಪ್ಪರಗಿ ರಾಜ್ಯ ಹೆದ್ದಾರಿ ತಡೆದು ಉಪವಾಸ ಸತ್ಯಾಗ್ರಹ ಮಾಡಲಾಗುವದೆಂದು ಎಚ್ಚರಿಕೆ ನೀಡಿದರು.

ಮನವಿ ಸ್ವೀಕರಿಸಿದ ಉಪ ತಸೀಲ್ದಾರ್‌ರು ಮನವಿಯನ್ನು ಸರ್ಕಾರಕ್ಕೆ ಕಳುಹಿಸಲಾಗುವದು, ರೈತರಿಗೆ ನ್ಯಾಯ ಕೊಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೆನೆ ಎಂದರು. ಈ ವೇಳೆ ರಾಮಚಂದ್ರ ದೊಡ್ಡಮನಿ, ರವಿ ನಡಗಡ್ಡಿ, ಪ್ರಕಾಶ ಮುಂಜಿ, ಬೀರಪ್ಪವಗ್ಗಿ, ವಿಠ್ಠಲ ಹೋರ್ತಿ, ಮಲ್ಲಿಕಾರ್ಜುನ ದಿವಟಗಿ, ಪ್ರಶಾಂತ ದೇಗಿನಾಳ, ರಾಕೇಶ ಬಾಗಲಕೋಟೆ, ಶರಣು ಕಲ್ಲೂರ, ಶಂಕರ ಗಬಸಾವಳಗಿ, ರಮೇಶ ಚಾಂದಕವಟೆ, ಬೀಮಣ್ಣ ಕನ್ನೂರ ಸೇರಿ ಹಲವರು ಇದ್ದರು.

ಬೇಡಿಕೆ ಈಡೇರಿಕೆಗೆ ಏ.20 ಗಡುವು

ಬೇಡಿಕೆ ಈಡೇರದಿದ್ದರೆ ಇಂಡಿ ಪಟ್ಟಣ ಬಂದ್ ಎಚ್ಚರಿಕೆ ನೀಡಿದ ಕರವೇ

• **ಕನ್ನಡಪ್ರಭ ವಾರ್ತೆ** ಇಂಡಿ

ನಷ್ಟವಾದ ತೊಗರಿ ಬೆಳೆಗೆ ರಾಜ್ಯ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು. ವಿಮಾ ಕಂಪನಿಯಿಂದರೈತರಿಗಾಗುತ್ತಿರುವಅನ್ಯಾಯವನ್ನು ಸರಿಪಡಿಸಬೇಕು. ರಾಜ್ಯ ಬೀಜ ನಿಗಮದಿಂದ ಕೃಷಿ ಇಲಾಖೆಗೆ ಸರಬರಾಜು ಮಾಡಿದ ಕಳಪೆ ತೊಗರಿ ಬೀಜದ ಕುರಿತು ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಕರವೇ ತಾಲೂಕು ಅಧ್ಯಕ್ಷ ಬಾಳು ಮುಳಜಿ ನೇತೃತ್ವದಲ್ಲಿ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಅಹೋರಾತ್ರಿ ಧರಣಿ ನಡೆಸಲಾಯಿತು.

ಈ ವೇಳೆ ಸ್ಥಳಕ್ಕೆ ಎಸಿ ಅನುರಾಧಾ ವಸ್ತ್ರದ, ಸಹಾಯಕ ಕೃಷಿ ನಿರ್ದೇಶಕ ಮಹಾದೇವಪ್ಪ ಏವೂರ, ಕೆಬಿಜೆಎನ್‌ಎಲ್ ಎಇಇ ಭೇಟಿ ನೀಡಿ, ಬೇಡಿಕೆ ಈಡೇರಿಸುವ ಕುರಿತು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಬಗೆ ಹರಿಸುವ ಭರವಸೆ ನೀಡಿದ ಮೇಲೆ ಧರಣಿಯನ್ನು ಹಿಂಪಡೆಯಲಾಯಿತು. ಇಂಡಿಯ ಎಲ್ಲಾ ಶಾಖಾ ಕಾಲುವೆಗೆ ಹಾಗೂ ಗುತ್ತಿ ಬಸವಣ್ಣ ಏತ ನೀರಾವರಿ ಕಾಲುವೆಗಳಿಗೆ ಕೂಡಲೇ ನೀರು ಹರಿಸಬೇಕು. ಪ್ರತಿ ವರ್ಷಬೇಸಿಗೆ ಯಲ್ಲಿ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು ಎಂಬ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಧರಣಿ ನಿರತರ ಮನವೊಲಿಸಿ ಎಸಿ ಅವರು ಎಳೆ ನೀರು ನೀಡಿ ಧರಣಿ ಅಂತ್ಯಗೊಳಿಸಲಾಯಿತು.

ಈ ವೇಳೆ ಮಾತನಾಡಿದ ಎಸಿ ಅನುರಾಧಾ ವಸ್ತ್ರದ, ತಮ್ಮ ಬೇಡಿಕೆ ಕುರಿತು ಡಿಸಿ ಗಮನ ಕ್ಕೆ ತಂದು ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು.

ಸಹಾಯಕ ಕೃಷಿ ನಿರ್ದೇಶಕ ಮಹಾದೇವಪ್ಪ ಏವೂರ ಮಾತನಾಡಿ, ರೈತಪರ ಚಿಂತನೆ, ಕಾಳಜಿ ವಹಿಸುವ ಶಾಸಕರಾದ ಯಶವಂತರಾಯಗೌಡ ಪಾಟೀಲ ಅವರು ರೈತರ ಧ್ವನಿಯಾಗಿ ಅಧಿವೇಶನ ದಲ್ಲಿ ಚರ್ಚಿಸಿದ್ದಾರೆ. ಮೇಲಾಧಿಕಾರಿಗ ಳ ಗಮನಕ್ಕೆ

ತಂದು ರೈತರ ಸಮಸ್ಯೆ ಬಗೆಹರಿಸಲಾ ಗುತ್ತದೆ ಎಂದು ಹೇಳಿದರು. ಬೀಜ ನಿಗಮದಿಂದ ಬರುವ ಬಿತ್ತನೆ ಬೀಜ, ಶ್ಯಾಂಪಲ್ ತಗೆದು ಗುಣಮ ಟ್ಟ ಪರೀಕ್ಷೆಗೆ ಕಳುಹಿಸಲಾಗುತ್ತದೆ. ಅವರು ಪ್ರಮಾಣಿಕರಣ ಪತ್ರ ನೀಡಿದ ಮೇಲೆ ಬೀಜ ವಿತರಣೆ ಮಾಡಲಾಗುತ್ತದೆ ಎಂದು ಹೇಳಿದರು.

ಬಾಳು ಮುಳಜಿ ಮಾತನಾಡಿ, ರೈತಪರ ಬೇಡಿಕೆಗಳು ಬರುವ ಏ.20ರೊಳಗೆ ಈಡೇರಿಸಬೇಕು. ಇಲ್ಲವಾದರೆ ಏ.20 ರಂದು ಇಂಡಿ ಬಂದಮಾಡಲಾಗುತ್ತದೆ. ಅಧಿಕಾರಿಗಳು ಭರವಸೆ ನೀಡಿದಕ್ಕಾಗಿ ಧರಣಿ ತಾತ್ಕಾಲಿಕವಾಗಿ ಹಿಂಪಡೆಯಲಾಗುತ್ತದೆ ಎಂದು ಹೇಳಿದರು. ಎಸಿಗೆ ಮನವಿ ಸಲ್ಲಿಸಿದರು.

ಅನಿಲಗೌಡ ಬಿರಾದಾರ, ಧರ್ಮು ಸಾಲೋಟಗಿ, ಮಂಜು ದೇವರ, ಮಹೇಶ ಹೂಗಾರ, ಪ್ರಶಾಂತ ಲಾಳಸಂಗಿ, ಪ್ರಶಾಂತ ಗೌಳಿ, ಪ್ರದೀಪ ಬೊರುಟಿ, ಮಲ್ಲು ಚಾಕುಂಡಿ, ಮಲ್ಲು ಬಿರಾದಾರ, ಪ್ರವೀಣ್ ಭಜಂತ್ರಿ, ವಿಜಯಕುಮಾರ ರಾಠೋಡ, ಅರವಿಂದ ಪಾಟೀಲ, ರಾಮಸಿಂಗ ಕನ್ನೊಳ್ಳಿ, ಮಹೇಶ ಕುಂಬಾರ, ಅಶೋಕ ಅಕಲಾದಿ, ಮಂಜು ದೇವರ, ಮಲ್ಲು ದೇವರ, ಮಹಾದೇವ ಗುಡ್ಡೊಡಗಿ, ಶ್ರೀಕಾಂತ್ ಬಡಿಗೇರ, ಭಾಗೇಶ ಮಲಘಾಣ, ಭೀಮಾಶಂಕರ ಆಳೂರ, ಸಾಗರ ಬಿರಾದಾರ, ಗಿರೀಶ್ ಪಾಟೀಲ, ಪ್ರಶಾಂತ ಗುಂದಗಿ, ಶಾಂತೇಶ ಕ್ಷತ್ರಿ, ಕಿರಣ ಕ್ಷತ್ರಿ ಇತರರು ಇದ್ದರು

KRIBHCO
Cooperative and beyond...
KRISHAK BHARATI COOPERATIVE LIMITED

ರಸ್ತೆ ಸಾರಿಗೆಗೆ ಗುತ್ತಿಗೆದಾರರ ಪೂರ್ವಾರ್ಹತೆ

ವಿಶಾಖಪಟ್ಟಣಂ, ಕೃಷ್ಣಪಟ್ಟಣಂ, ಗಂಗಾವರಂ, ಕಾಕಿನಾಡ, ಹೊಸ ಮಂಗಳೂರು, ಮುದ್ರಾ, ಪಿಪಾವಾವ್, ಕಾರ್ಯ್ಕಲ್ ತುನಾ, ಕಾಂಡ್ಲಾ ಮತ್ತು ಟ್ಯೂಟಿಕಾರನ್ ಈ ಬಂದರುಗಳಿಂದ ಆಮದು ಮಾಡಿದ ರಸಗೊಬ್ಬರಗಳ ಸಾಗಾಣಿಕೆಗೆ ರಸ್ತೆ ಸಾರಿಗೆದಾರರ ನೇಮಕಾತಿಯ ಪೂರ್ವ ಅರ್ಹತೆಗಾಗಿ ಕ್ರಿಭ್ಕೋ ಅರ್ಜಿಗಳನ್ನು ಆಹ್ವಾನಿಸುತ್ತಿದೆ. (2025-2028) ಪ್ರಸ್ತುತ ಮತ್ತು ಭವಿಷ್ಯದ ಅವಶ್ಯಕತೆಗಾಗಿ.
ಕ್ರಿಭ್ಕೋ ಪೂರ್ವ/ ಪಶ್ಚಿಮ ಕರಾವಳಿ ಬಂದರುಗಳಲ್ಲಿ ವಾರ್ಷಿಕವಾಗಿ ಸುಮಾರು 20.00 ಲಕ್ಷ ಎಂಟಿ ಬೃಹತ್ ಆಮದು ರಸಗೊಬ್ಬರಗಳನ್ನು ನಿರ್ವಹಿಸುತ್ತಿದೆ.
ರಸಗೊಬ್ಬರ, ಆಹಾರ ಧಾನ್ಯಗಳು, ಸಕ್ಕರೆ, ಸಿಮೆಂಟ್, ಬೀಜಗಳು ಮತ್ತು ಇತರೆ ಸಾಮಗ್ರಿಗಳ ಚೀಲಗಳ ಸರಕು ಸಾಗಾಣಿಕೆಯಲ್ಲಿ ಅನುಭವ ಹೊಂದಿರುವ ಹೆಸರಾಂತ ರಸ್ತೆ ಸಾರಿಗೆದಾರರಿಂದ ಆಹ್ವಾನಿಸುತ್ತಿದೆ. ಅರ್ಜಿ ನಮೂನೆ ಮತ್ತು ಸಂಪೂರ್ಣ ವಿವರಗಳಿಗಾಗಿ ಕ್ರಿಭ್ಕೋ ವೆಬ್‌ಸೈಟ್ **www.kribhco.net.**ನಲ್ಲಿ ಲಭ್ಯವಿದೆ.
ಈಗಾಗಲೇ ಅರ್ಹತೆ ಪಡೆದಿರುವ ಸಾಗಾಣಿಕೆದಾರರು ಮೇಲಿನ ಕೆಲಸಕ್ಕೆ ಹೊಸದಾಗಿ ಸಲ್ಲಿಸಬೇಕು.
ಸಂಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಗಳನ್ನು ಈ ಕೆಳಗಿನ ವಿಳಾಸಕ್ಕೆ 02.05.2025ರ ಒಳಗೆ ಅಥವಾ ಅದಕ್ಕೂ ಮುಂಚಿತವಾಗಿ ಕಳುಹಿಸಬೇಕು.
ಎಸ್‌ಹೆಚ್ ಎಲ್.ಪಿ. ಗುಡ್‌ವಿನ್, ಜಟಿ.ಜಿಎಂ (ಮಾರ್ಕೆಟಿಂಗ್) ಕ್ರಿಶಿಕ್ ಭಾರತಿ ಕೋಆಪರೇಟಿವ್ ಲಿಮಿಟೆಡ್,
ಎ-10, ಸೆಕ್ಟರ್-1, ನೊಯ್ಡಾ, ಜಿಲ್ಲೆ, ಗೌತಮ್ ಬುದ್ಧ್, ನಗರ್, ಯುಪಿ-201 301
ಫೋ: 0120-2534631 ಎಕ್ಸ್‌ಟೆನ್ಷನ್ 232, E-mail: goodwin@kribhco.net

ಕ್ರಿ.ಮಿ.ನಂ.402/2025
ಮೆ॥ ಜೆ.ಎಮ್.ಎಫ್.ಸಿ ಸಿಂದಗಿ ಇವರ ನ್ಯಾಯಾಲಯ ಸಿಂದಗಿ
1) ಬಸವಂತ್ರಾಯ ತಂ.ಶರಣಗೌಡ ಹಾಗೂ ಇತರರು. ...ಅರ್ಜಿದಾರರು
– ವಿರುದ್ಧ –
1) ಮೆ॥ ತಹಶೀಲ್ದಾರ ಕಾರ್ಯಾಲಯ ಸಿಂದಗಿ. ...ಎದುರುದಾರ
ಅರ್ಜಿ ಆದೇಶ 5 ನಿಯಮ (20) ಸಿ.ಪಿ.ಸಿ.ಅಡಿಯಲ್ಲಿ ಪತ್ರಿಕೆ ಪ್ರಕಟಣೆಗಾಗಿ

ಇದರಲ್ಲಿ ಅರ್ಜಿದಾರನು ಎದುರುದಾರರ ಮೇಲೆ ತನ್ನ ತಂದೆ ಮೃತವಾದ ಬಗ್ಗೆ ಅರ್ಜಿ ಸಲ್ಲಿಸಿದ್ದು ಸದರ ಪ್ರಕರಣದಲ್ಲಿ ಅರ್ಜಿದಾರನ ತಂದೆಯಾದ ಶರಣಗೌಡ ತಂ.ಬಸವಂತ್ರಾಯ ತುಂಬಗಿ ಇವರು ದಿನಾಂಕ 22-02-1996 ರಂದು ಮೃತವಾದ ಬಗ್ಗೆ **ಮೆ॥ ಜೆ.ಎಮ್.ಎಫ್.ಸಿ. ಸಿಂದಗಿ ಇವರ ನ್ಯಾಯಾಲಯದಲ್ಲಿ ಈ ಮೇಲೆ ಹೇಳಿದ ದಿನಾಂಕದಂದು 25-04-2025 ಮುಂಜಾನೆ 8 ಗಂಟೆಗೆ** ಹಾಜರಾಗಲೂ ಮುದ್ದತ್ತು ಇದ್ದು ಸದರಿ ದಿನದಂದು ನೀವಾಗಲೀ ಅಥವಾ ನಿಮ್ಮ ಪರ ವಕೀಲರ ಮೂಲಕವಾಗಲೀ ಸದರ ಪ್ರಕರಣದಲ್ಲಿ ಹಾಜರಾಗಿ ಏನಾದರೂ ತಕರಾರು ಇದ್ದರೆ ಸದರಿ ದಿನಾಂಕದಂದು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

8-4-2025 ರಂದು ನ್ಯಾಯಾಲಯದ ಮುದ್ರೆಯೊಂದಿಗೆ ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು (ಆಡಳಿತ)
ದಿವಾಣಿನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ಸಿಂದಗಿ
ಶ್ರೀ ಎಸ್.ಎಚ್.ನರಬೋಳಿ
ಅರ್ಜಿದಾರರ ಪರ ವಕೀಲರು

ಕನ್ನಡಪ್ರಭ
ಚಿತ್ರಪ್ರಭ

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
(ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

ಇ-ಹರಾಜು ಸೂಚನೆ

2002ರ ಭದ್ರತಾ ಹಿತಾಸಕ್ತಿ ನಿಯಮಗಳ ಪ್ರಾವಿಸೋ ರೂಲ್ 8(6) ಮತ್ತು 9 ರೊಂದಿಗೆ ಓದಿಕೊಳ್ಳಬೇಕಾದ ಸೆಕ್ಯುರೈಟೇಜೇಷನ್ ಅಂಡ್ ರೀಕನ್ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಸರ್ಫೇಸಿ ಕಾಯಿದೆ), 2002 ರಡಿ ಆಸ್ತಿಗಳ ಇ-ಹರಾಜು ಮಾರಾಟಕ್ಕಾಗಿ ಸಾರ್ವಜನಿಕ ಸೂಚನೆ

ಆದಾಗ್ಯೂ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸರ್ಫೇಸಿ ಕಾಯಿದೆಯ ಕಲಂ 13(4)ರಡಿ ಕೆಳಕಂಡ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಮಾಹಿತಿ ನೀಡುವುದೇನೆಂದರೆ ಸಾಲ ಪಡೆಯಲು ಸಾಲಗಾರರು ಅಡಮಾನ ಮಾಡಿರುವ ಆಸ್ತಿಗಳನ್ನು ಬ್ಯಾಂಕಿಗೆ ಬಾಕಿಯಾಗಿರುವ ಸಾಲಗಳ ವಸೂಲಾತಿಗಾಗಿ ''ಎಲ್ಲಿ ಹೇಗಿದೆಯೋ ಹಾಗೆಯೇ'' ಹಾಗೂ ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ ಸರ್ಫೇಸಿ ಕಾಯಿದೆಯಂತೆ ಇ-ಹರಾಜು ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಸಾಲದ ಖಾತಾ ಸಂಖ್ಯೆ	ಮೂಲ ಸಾಲಗಾರ/ ಸಹ-ಸಾಲಗಾರ/ ಜಾಮೀನುದಾರ/ಹೆಸರು	13-2 ನೋಟೀಸ್ ದಿನಾಂಕ	ಸ್ವಾಧೀನತೆಯ ದಿನಾಂಕ	ಪ್ರಸ್ತುತ ಬಾಕಿ ಮೊತ್ತ ದಿನಾಂಕ 08.04.2025 ರಂದು ಇದ್ದಂತೆ	ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ	ಮೀಸಲು ಬೆಲೆ ಐಎನ್‌ಆರ್	ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಂಡಿ) ಐಎನ್‌ಆರ್	ಇ-ಹರಾಜಿನ ದಿನಾಂಕ ಮತ್ತು ಸಮಯ	ಬಿಡ್ ಸಲ್ಲಿಸಲು ಸ್ಥಳ ಮತ್ತು ಕೊನೆಯ ದಿನಾಂಕ ಮತ್ತು ಸಮಯ
1	45429440000033	1) ಶ್ರೀ ಗೌಸ್‌ಮುದ್ದೀನ್ ಕಖಂಡಕಿ, ಮಾಲೀಕರು ಮೆ॥ ಸಾಯಿ ಜ್ಯೂವೆಲರಿ, ಅಲ್ಲದೇ: ಮೆ॥ ಸಾಯಿ ಜ್ಯೂವೆಲರಿ, 2) ಶ್ರೀಮತಿ ನೌಶಾದ್ ಗೌಸಮುದ್ದೀನ್ ಕಖಂಡಕಿ.	21.05.2024	22.03.2025	ರೂ. 3,01,480.23 (ಮೂರು ಲಕ್ಷದ ಒಂದು ಸಾವಿರದ ನಾಲ್ಕು ನೂರ ಎಂಭತ್ತು ರೂ. ಮತ್ತು ಇಪ್ಪತ್ತ ಮೂರು ಪೈ. ಮಾತ್ರ)	29.04.2025 Time: 09:30 AM to 05:00 PM	ರೂ. 12,02,000/- (ಹನ್ನೆರಡು ಲಕ್ಷದ ಎರಡು ಸಾವಿರ ರೂ. ಗಳು ಮಾತ್ರ)	ರೂ. 1,20,200/- (ಒಂದು ಲಕ್ಷದ ಇಪ್ಪತ್ತು ಸಾವಿರದ ಇನ್ನೂರು ರೂ. ಗಳು ಮಾತ್ರ)	14.05.2025 @ 02:00 PM	13.05.2025, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಮುಖ್ಯ ಕಛೇರಿ: ದಿ ಫೇರ್‌ವೇ, ನೆಲಮಹಡಿ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071.

ಭದ್ರತಾ ಆಸ್ತಿಯ ವಿವರಣೆ: ಸಕಲ ಸಮಸ್ತವೂ ಸೇರಿದ ಮಾಲೀಕರ ಸ್ಥಿರಾಸ್ತಿ ಮತ್ತು ಅಂಗೀಕಾರವಾದ ಮನೆಯ ಆಸ್ತಿಯ ಸಿಟಿಎಸ್ ಸಂ. 664/1, ಒಟ್ಟಾರೆ ಅಳತೆ 40.4/9 ಚದರ ಗಜ, (33.82 ಚದರ ಮೀಟರ್) ಸಿಟಿಎಸ್ ವಾರ್ಡ್ ಸಂ. VI ವಿಜಯಪುರಕ್ಕೆ ಸೇರಿದ್ದು, ಚಕ್ಕುಬಂದಿ: ಪೂರ್ವಕ್ಕೆ: ಬಿಬಿ ಬುರಾಕ್ ಜಹಗೀರ್‌ದಾರ್ ರವರಿಗೆ ಸೇರಿದ ಸಿಟಿಎಸ್ ಸಂ. 664/2, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಜೀರ್ ಖಲೀಫ ರವರಿಗೆ ಸೇರಿದ ಸಿಟಿಎಸ್ ಸಂ. 664ಬಿ/2, ದಕ್ಷಿಣಕ್ಕೆ: ಸಿಟಿಎಸ್ ಸಂ. ಬಿಎಲ್ (ಲೇನ್), ನಂತರ ಬಾಷಾಸಾಬ್ ಪಠಾಣ್ ರವರಿಗೆ ಸೇರಿದ ಆಸ್ತಿ.

ಆಸ್ತಿಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಮಾರಾಟ ಮಾಡಲಾಗುವುದು. ಇ-ಹರಾಜನ್ನು 'ಆನ್ ಲೈನ್' ಮೂಲಕ ನಡೆಸಲಾಗುತ್ತದೆ. ಹರಾಜನ್ನು ಬ್ಯಾಂಕ್ ಅಂಗೀಕೃತ ಸೇವಾ ಒದಗಿಸುವವರಾದ ಮೆ॥-4 ಕ್ಲೋಸರ್ ಮೂಲಕ https://bankauctions.in & www.foreclosureindia.com. ಎಂಬುವ ವೆಬ್‌ಪೋರ್ಟಲ್‌ನಲ್ಲಿ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮತ್ತು ವಿವರಗಳಿಗಾಗಿ, ನೆರವಿಗಾಗಿ, ಕ್ರಮಗಳ ತಿಳಿದುಕೊಳ್ಳುವುದಕ್ಕಾಗಿ ಮತ್ತು ಇ-ಹರಾಜು ಆನ್‌ಲೈನ್ ತರಬೇತಿ ಪಡೆದುಕೊಳ್ಳುವುದಕ್ಕಾಗಿ ಭಾವಿ ಬಿಡ್‌ದಾರರು ಮೆ॥-4 ಕ್ಲೋಸರ್ ಸಂಪರ್ಕ ಶ್ರೀ ಎಂ ಶ್ರೀನಿವಾಸಲು, ಸಂಪರ್ಕ ಸಂ. 8142000809. Email id: info@bankauctions.in / srinivas@bankauctions.in. ಇವರನ್ನು ಸಂಪರ್ಕಿಸುವುದು.

ಷರತ್ತು ಮತ್ತು ನಿಬಂಧನೆಗಳ ಹೆಚ್ಚಿನ ವಿವರಗಳಿಗಾಗಿ ಹಾಗೂ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕಾಗಿ ಹಾಗೂ ಆಸ್ತಿ ಸಂಬಂಧಿತ ಯಾವುದೇ ವಿವರಗಳಿಗಾಗಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳಾದ ಶ್ರೀ ರಂಜನ್ ನಾಯಕ್, (ಮೊ.ಸಂ. 6362951653), ಶ್ರೀ ಉಮೇಶ್ (ಮೊಬೈಲ್ ಸಂ. 8050149617) ಮತ್ತು ಶ್ರೀಮತಿ ಸಾಯಿದಾ (ಮೊಬೈಲ್ ಸಂ. 7400445147) ಅನ್ನು ಸಂಪರ್ಕಿಸುವುದು. ಅಧಿಕೃತ ಅಧಿಕಾರಿಗಳ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗೆ ಬಂದಂತೆ ಆಸ್ತಿಗಳ ಮೇಲೆ ಯಾವುದೇ ಋಣಭಾದ್ಯತೆಗಳು ಇಲ್ಲ. ಆದಾಗ್ಯೂ, ಇಚ್ಛೆಯುಳ್ಳ ಬಿಡ್‌ದಾರರು ಬಿಡ್ ಸಲ್ಲಿಸುವ ಮುಂಚೆ ಆಸ್ತಿಯ ಋಣಭಾದ್ಯತೆಗಳು ಹಾಗೂ ಸ್ವಾಮ್ಯ ಮುಂತಾದವುಗಳ ಬಗ್ಗೆ ಅವರದೇ ಸ್ವತಂತ್ರ ವಿಚಾರಣೆಗಳನ್ನು ನಡೆಸಿ ತಿಳಿದುಕೊಳ್ಳಬಹುದಾಗಿದೆ. ಷರತ್ತಿನ ಬಿಡ್‌ಗಳನ್ನು ಒಪ್ಪಿಕೊಳ್ಳುವುದಿಲ್ಲ. ಮೇಲೆ ಹೆಸರಿಸಲಾದ. ಸಾಲಗಾರರು/ ಜಾಮೀನುದಾರರು/ ಅಡಮಾನದಾರರುಗಳಿಗೆ ಈ ಮೂಲಕ ಅಧಿಸೂಚಿಸುವುದೇನೆಂದರೆ ಮೇಲೆ ತಿಳಿಸಿದ ಬಾಕಿ ಮೊತ್ತ ಜೊತೆಗೆ ಅಪ್ ಟು ಡೇಟ್ ಬಡ್ಡಿ ಹಾಗೂ ಸಾದಿಲ್ವಾರು ವೆಚ್ಚಗಳನ್ನು ಹರಾಜಿನ ದಿನಾಂಕಕ್ಕೆ ಮುಂಚೆ ಪಾವತಿ ಮಾಡಬೇಕು. ವಿಫಲರಾದಲ್ಲಿ ಮೇಲಿನ ಆಸ್ತಿಯನ್ನು ಮಾರಾಟ ಮಾಡಿ ಸಾಲದ ಬಾಕಿಗಾಗಿ ಹೊಂದಿಸಿಕೊಳ್ಳಲಾಗುವುದು. ಇನ್ನೂ ಬಾಕಿ ಉಳಿದ ಪಕ್ಷದಲ್ಲಿ ಅದನ್ನು ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲು ಮಾಡಿಕೊಳ್ಳಲಾಗುವುದು.

ದಿನಾಂಕ: 11.04.2025, ಸ್ಥಳ: ವಿಜಯಪುರ **ಸಹಿ/- ಅಧಿಕೃತ ಅಧಿಕಾರಿ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**

IN THE COURT OF SENIOR CIVIL JUDGE INDI. AT: INDI
Execution Petition No. 12/2018
1) Bank of Baroda, Branch Nivaragi ...Decree Holder
V/s.
1) Ashwini D/o. Raju Guddapur and Others ...Judgment Debtors
SUMMONS TO JDR NO. 1(A) TO 1(D)
1) Ashwini D/o. Raju Guddapur Age: 31 Yrs, R/o: Miragi Tq: Indi, Dist: Vijayapur
2) Deepa D/o. Raju Guddapur Age: 27 Yrs, R/o: Umaraj Tq: Indi, Dist: Vijayapur
3) Aishwarya D/o. Raju Guddapur Age: 19 Yrs, R/o: Umaraj Tq: Indi, Dist: Vijayapur
4) Nagappa S/o. Raju Guddapur Age: 48 Yrs, R/o: Umaraj Tq: Indi, Dist: Vijayapur
SUMMONS U/S 5 RULE 20(1)(A) OF CPC

Whereas the above named Decree Holder have instituted a suit against you in above said Court, you are hereby summoned to appear in this Court either in person or through Advocate duly instructed by you on the date of **21/06/2025** in the forenoon to answer the claim and you are directed to produced to produce on the day all the documents upon which you intend to reply in support of your defense.

Take summons that in default of your appearance on the day fixed your appearance in above mentioned suit will be heard and determined in your absence.

Given under my hand and seal of the court this day.

Today's Date: 09/04/2025 My Signature on and issue with the seal of the Court.
By Court order
Sd/- **Sheristedar (Adm)**
Senior Civil Judge & JMFC Court Indi
Sd/- **S. G. Kulkarni** (Seal)
Advocate

ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಇಂಡಿ ಇವರ ನ್ಯಾಯಾಲಯದಲ್ಲಿ ಸಾ: ಇಂಡಿ
ಎಫ್.ಡಿ.ಪಿ. ಸಂಖ್ಯೆ: 6/2022
1) ಶ್ರೀಮತಿ ಸುಮಂಗಲಾ ಗಂ. ಅನೀಲ ಮಾನವಿ ಮತ್ತು ಇನ್ನೊಬ್ಬ ...ವಾದಿಯರು
ವಿರುದ್ಧ
1) ಮಡಿವಾಳಪ್ಪ ತಂ. ಗುರುಸಿದ್ದಪ್ಪ ಪಾಟೀಲ ಮತ್ತು ಇತರರು ...ಪ್ರತಿವಾದಿಯರು
ಜಾಹೀರಾತು

ಇದರಲ್ಲಿ ಪ್ರತಿವಾದಿ ನಂ.4 ಆಗಿರುವ ಶಿವಾನಂದ ತಂ. ಮಡಿವಾಳಪ್ಪ ಪಾಟೀಲ, ವಯಾ: 53 ವರ್ಷ, ಸಾ: ಭೀರಪ್ಪ ನಗರ ಇಂಡಿ ಮತ್ತು ಪ್ರತಿವಾದಿ ನಂ.7 ಆಗಿರುವ ಶ್ರೀಮತಿ ಕಲಾವತಿ ಗಂ. ಜಗನ್ನಾಥ ಪತ್ತಾರ, ವಯಾ: 45 ವರ್ಷ, ಸಾ: ಇಂಡಿ, ತಾ: ಇಂಡಿ, ಜಿ: ವಿಜಯಪುರ, ಇವರಿಗೆ ತಿಳಿಸುವುದೇನೆಂದರೆ:–

ಮೇಲೆ ತಿಳಿಸಿದ ವಾದಿಯರಾದ ಶ್ರೀಮತಿ ಸುಮಂಗಲಾ ಗಂ. ಅನೀಲ ಮಾನವಿ ಸಾ: ಹುಡ್ಕೋ ಕಾಲನಿ ಗದಗ ಇವರು ಮಾನ್ಯ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಇಂಡಿ ಇವರ ನ್ಯಾಯಾಲಯದಲ್ಲಿ ಎಫ್.ಡಿ.ಪಿ. ನಂ. 6/2022 ಇದನ್ನು ದಾಖಲಿಸಿದ್ದು ಇರುತ್ತದೆ. ಸದರಿ ದಾವೆಯಲ್ಲಿ ತಾವು ಪ್ರತಿವಾದಿ ನಂ.4 ಮತ್ತು 7 ಅಂತಾ ಇರುತ್ತೀರಿ.

ಈ ಜಾಹೀರಾತಿನ ಮೂಲಕ ನಿಮಗೆ ತಿಳಿಸುವುದೇನೆಂದರೆ, ನೀವು ಮೇಲೆ ತಿಳಿಸಿದ ನ್ಯಾಯಾಲಯದಲ್ಲಿ ದಿನಾಂಕ: **29/04/2025** ರಂದು ಬೆಳಿಗ್ಗೆ 7:30 ಘಂಟೆಗೆ ತಾವು ಖುದ್ದಾಗಿ ಅಥವಾ ವಕೀಲರ ಮುಖಾಂತರ ಹಾಜರಾಗಿ ತಮ್ಮ ಹೇಳಿಕೆ ನೀಡಬೇಕು. ಇಲ್ಲದಿದ್ದರೆ ಸದರಿ ಪ್ರಕರಣವನ್ನು ತಮ್ಮ ಗೈರು ಹಾಜರಿಯಲ್ಲಿ ಏಕತರ್ಫ ಅಂತಾ ಪರಿಗಣಿಸಿ ಸೂಕ್ತ ಆದೇಶ ಮಾಡಲು ಬರುವುದು.

ಇವತ್ತು ದಿನಾಂಕ: 07/04/2025 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲ್ಪಟ್ಟಿದೆ.
ಸ್ಥಳ: ಇಂಡಿ, ದಿನಾಂಕ: 07/04/2025
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– **ಹಿರಿಯ ಶಿರಸ್ತೇದಾರರು**
ಹಿರಿಯ ದಿವಾಣಿ ನ್ಯಾಯಾಲಯ ಇಂಡಿ
ಸಹಿ/– **ಸತೀಶ್ಚಂದ್ರ ಜಿ. ಕುಲಕರ್ಣಿ**
ವಕೀಲರು, ಇಂಡಿ

ಕನ್ನಡಪ್ರಭ
ಚಿತ್ರಪ್ರಭ